ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 2, May-June 2025, Pp. 101-109
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಏಕಾಂತ ಸುಖ: ವರ್ತಮಾನದ ತಲ್ಲಣಗಳು

**ಸುನೀತ ಎಲ್.ಎಸ್[1] ಮತ್ತು ಡಾ. ಬಿ. ಎಸ್. ಸುದೀಪ್[2]**
[1]ಸಂಶೋಧನಾ ವಿದ್ಯಾರ್ಥಿನಿ, [2]ಸಹ ಪ್ರಾಧ್ಯಾಪಕರು
ಕನ್ನಡ ಸ್ನಾತಕೋತ್ತರ ವಿಭಾಗ, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಮೈಸೂರು

***Abstract:***

*ಭುವನೇಶ್ವರಿ ಹೆಗಡೆ ಅವರು ಸುಮಾರು ನಾಲ್ಕು ದಶಕಗಳಿಂದಲೂ ಬರವಣಿಗೆ ಮಾಡುತ್ತಾ ಬಂದಿರುವ ಲೇಖಕಿ. ಇವರ ನಗೆಬರೆಹಗಳು ಪತ್ರಿಕಾ ಮಾಧ್ಯಮದ ಮೂಲಕ ಓದುಗರಿಗೆ ಚಿರಪರಿಚಿತ. ಇವರ ಕೆಲವು ನಗೆಬರೆಹಗಳನ್ನು ಲಲಿತ ಪ್ರಬಂಧಗಳೆಂದು ಕೂಡ ಗುರುತಿಸಲಾಗಿದೆ. ನಗೆಬರೆಹಗಳು ಕೇವಲ ನಗಿಸುವುದಕ್ಕೆ ಮೀಸಲಾಗಿದ್ದರೆ, ಲಲಿತ ಪ್ರಬಂಧಗಳು–ನವಿರಾದ ಹಾಸ್ಯದ ಜೊತೆಗೆ ವಸ್ತು ವಿಷಯವನ್ನು ಕುರಿತು ಗಂಭೀರವಾಗಿ ಯೋಚಿಸುವಂತೆ ಮಾಡುತ್ತವೆ. ಭುವನೇಶ್ವರಿ ಹೆಗಡೆಯವರ ನಗೆಬರೆಹಗಳು/ಲಲಿತ ಪ್ರಬಂಧಗಳು ಗಂಭೀರವಾದ ಕೆಲವು ಚರ್ಚೆಗಳನ್ನು ನಯವಾಗಿ ಎತ್ತಿವೆ. ಅವುಗಳಲ್ಲೊಂದು ಹೆಣ್ಣಿನ ಏಕಾಂತ. ಕನ್ನಡ ಮಹಿಳಾ ಸಾಹಿತ್ಯದಲ್ಲಿಯೂ ಹೆಣ್ಣು ತನ್ನ ಜಗತ್ತು, ತನ್ನ ಏಕಾಂತವನ್ನು ಕಾಪಾಡಿಕೊಳ್ಳುವ ನಿಟ್ಟಿನ ಕಥನಗಳು ಹಲವಾರು ಇವೆ. ಭುವನೇಶ್ವರಿ ಹೆಗಡೆಯವರ ಲಲಿತ ಪ್ರಬಂಧಗಳಲ್ಲಿಯೂ ಹೆಣ್ಣು ತನ್ನ ಜಗತ್ತಿನಲ್ಲಿ ಇದ್ದುಬಿಡುವ, ತನ್ನದೇ ಆದ ಲೋಕವೊಂದನ್ನು ನಿರ್ಮಿಸಿಕೊಳ್ಳುವ, ಏಕಾಂತದ ಸುಖವನ್ನು ಅನುಭವಿಸುವ ಬಯಕೆ ಅವರ 'ಏಕಾಂತ ಸುಖ' ಎಂಬ ಪ್ರಬಂಧದಲ್ಲಿ ಅಭಿವ್ಯಕ್ತಗೊಂಡಿದೆ.*

***Keywords:*** *ಕನ್ನಡ ಸಾಹಿತ್ಯ, ಏಕಾಂತ ಸುಖ, ನಗೆಬರೆಹ, ಪ್ರಬಂಧ, ಭುವನೇಶ್ವರಿ ಹೆಗಡೆ*

**ಪೀಠಿಕೆ**

ಪ್ರತಿಯೊಂದು ವಿಷಯವು ಕಾಲದಿಂದ ಕಾಲಕ್ಕೆ ಬೇರೆ ಬೇರೆ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಅದರಲ್ಲಿ 'ಏಕಾಂತ' ವಿಚಾರವು ಒಂದು. ಹಿಂದಿನ ದಿನಗಳಲ್ಲಿ ಪ್ರತಿಯೊಬ್ಬರು ತಂತ್ರಜ್ಞಾನದ ಸೋಗಿಲ್ಲದೆ ತಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳಬೇಕಿತ್ತು. ಆಗ ಸ್ವಲ್ಪ ಹೊತ್ತಾದರೂ ವಿಶ್ರಮಿಸಲು ಅಥವಾ ತನಗಾಗಿ ಮಿಡಿವ ಮನಸ್ಸಿನೊಂದಿಗೆ ಮುಖಾಮುಖಿ ಮಾತನಾಡಿ ಹಗುರ ಮಾಡಿಕೊಳ್ಳಲು ಏಕಾಂತವನ್ನು ಬಯಸುತ್ತಿದ್ದರು. ಆದರೆ ಈಗ ಆಧುನಿಕ ತಂತ್ರಜ್ಞಾನ ಮತ್ತು ವಿಭಕ್ತ ಕುಟುಂಬಗಳಿಂದ ಸಾಕಷ್ಟು ಜನರಿಗೆ ತಾನಾಗಿಯೇ ಏಕಾಂತ ಲಭಿಸುತ್ತಿದೆ. ಆದರೆ ಅದನ್ನು ಸಕರಾತ್ಮಕವಾಗಿ ಬಳಸಿಕೊಳ್ಳುವ ನಿಟ್ಟಿನಲ್ಲಿ ಸೋತಿರುವವರು ಅನೇಕ. ಇಂತಹ ಜನಮಾನಸಕ್ಕೆ ಸ್ಫೂರ್ತಿಯಾಗಿ, ವರ್ತಮಾನಕ್ಕೆ ಸ್ಪಂದಿಸುವುದರ ಮೂಲಕ ಲಲಿತ ಪ್ರಬಂಧಗಳು ಕೂಡ ವಿನೋದದೊಂದಿಗೆ ವಿಚಾರ ಲಹರಿಯನ್ನು ಹೊಂದಿರುತ್ತವೆ ಎನ್ನುವುದನ್ನು ಈ ಪ್ರಬಂಧದ ಮೂಲಕ ಅರಿಯಬಹುದು.

ಮನುಷ್ಯ ಸಂಘಜೀವಿಯಾದರೂ ಲೋಕದ ಜನಜಂಗುಳಿಯಿಂದ ದೂರ ಉಳಿದು ತಾನು

***Please cite this article as:*** ಸುನೀತ ಎಲ್.ಎಸ್ ಮತ್ತು ಬಿ. ಎಸ್. ಸುದೀಪ್. (2025). ಏಕಾಂತ ಸುಖ: ವರ್ತಮಾನದ ತಲ್ಲಣಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 4(2), 101–109

ಸ್ವತಂತ್ರವಾಗಿ ಬದುಕಬೇಕು, ಜೀವಿಸಬೇಕು, ಆಲೋಚಿಸಬೇಕು ಎಂಬ ಆಸೆ ಪ್ರತಿಯೊಬ್ಬರ ಜೀವಿತಾವಧಿಯಲ್ಲಿ ಒಮ್ಮೆಯಾದರೂ ಅನ್ನಿಸುತ್ತದೆ. ಅದರಲ್ಲೂ ಗಂಡಿಗಿಂತ ಹೆಣ್ಣು ಈ ವಿಷಯದಲ್ಲಿ ಒಂದು ಒಂದು ಹೆಜ್ಜೆ ಮುಂದೆ ಇರುತ್ತಾಳೆ. ಏಕೆಂದರೆ ನಮ್ಮ ನಾಡಿನ ಸಂಸ್ಕೃತಿಯಲ್ಲಿ ಹೆಣ್ಣು ಸದಾಕಾಲ ಪುರುಷನ ಕಣ್ಗಾವಲಿನಲ್ಲಿಯೇ ಬೆಳೆದವಳು. ಹುಟ್ಟಿದಾಗ ತಂದೆ–ತಾಯಿ ಮತ್ತು ಸಹೋದರ–ಸಹೋದರಿಯರು, ಮದುವೆಯಾದಾಗ ಪತಿ ಹಾಗೂ ಕುಟುಂಬದವರು, ವಯಸ್ಸಾದಾಗ ಮಕ್ಕಳು–ಮೊಮ್ಮಕ್ಕಳು ಹೀಗೆ ಹೆಣ್ಣು ಲಾಲನೆ–ಪಾಲನೆ ಎಂಬ ಹೆಸರಿನಲ್ಲಿಯೋ, ಅಬಲೆ ಅಥವಾ ಅಸಹಾಯಕಳು ಎಂತಲೋ ಬದುಕಿದ್ದಾಳೆ. ನಮ್ಮ ಸಮಾಜದಲ್ಲಿ ಇದು ಸಾರ್ವತ್ರಿಕ ಆಚರಣೆ ಅಥವಾ ಸಾಂಪ್ರದಾಯಕವಾಗಿ ಬೆಳೆದು ಬಂದಿದೆ. ಇವೆಲ್ಲದರ ಆಚೆ ಹೆಣ್ಣನ್ನು ಒಂದು ಸ್ವತಂತ್ರ ಜೀವಿಯಾಗಿ ನೋಡುವುದಾದರೆ ಆಕೆಗೂ ಜೀವ–ಭಾವಗಳಿವೆ, ಆಕಾಂಕ್ಷೆಗಳಿವೆ. ಎಲ್ಲರಂತೆ ತಾನು ಸ್ವತಂತ್ರವಾಗಿ ಜೀವಿಸಬೇಕೆಂಬ ಹಂಬಲವಿದೆ ಎಂಬುವುದು ಸತ್ಯ. ಆದರೆ ಒಂದು ಹೆಣ್ಣು ಮತ್ತೊಂದು ಹೆಣ್ಣನ್ನು ಹಾಗೂ ಗಂಡು ಹೆಣ್ಣಿನ ಮನೋಭಾವನೆಗಳನ್ನು ಅರ್ಥಮಾಡಿಕೊಳ್ಳುವವರೆಗೂ ಸ್ತ್ರೀ–ಪುರುಷರಿಬ್ಬರಲ್ಲೂ ಏಕಾಂತದ ಬಯಕೆಯ ಪ್ರಮಾಣ ಹಾಗೂ ಅನುಭವಿಸುವ ಪರಿ ಭಿನ್ನವಾಗಿಯೇ ಇರುತ್ತದೆ ಎನ್ನುವುದನ್ನು ಭುವನೇಶ್ವರಿ ಹೆಗಡೆ ಅವರ 'ಏಕಾಂತ ಸುಖ' ಲಲಿತ ಪ್ರಬಂಧದಿಂದ ಗುರುತಿಸಬಹುದು. ಇಲ್ಲಿ ವ್ಯಕ್ತವಾಗಿರುವ ಭಾವನೆಗಳು ಭುವನೇಶ್ವರಿ ಹೆಗಡೆ ಅವರ ಬರೆಹದಿಂದ ಮೂಡಿರುವ ಕಾರಣದಿಂದ ಅವುಗಳನ್ನು ಲೇಖಕಿಯ ಸ್ವಂತ ಅನುಭವದ ವಿಚಾರಗಳು ಎನ್ನಬಹುದಾದರೂ ಅವುಗಳೆಲ್ಲ ವಿಶಾಲಾರ್ಥದಲ್ಲಿ ಪ್ರತಿಯೊಂದು ಸ್ತ್ರೀ ಹೃದಯದ ಭಾವಗಳನ್ನು ಪ್ರತಿನಿಧಿಸುತ್ತವೆ ಎನ್ನುವುದು ಸ್ವೀಕಾರಾರ್ಹ ಸಂಗತಿಯಾಗಿದೆ.

ಜೀವನದಲ್ಲಿ ನೆಮ್ಮದಿಯೇ ಇಲ್ಲ ಎನ್ನುವವರ ನಡುವೆ ಈ ಏಕಾಂತದಲ್ಲಿ ಸುಖವನ್ನು ಕಂಡುಕೊಳ್ಳುವ ಬಗೆಯನ್ನು ತುಂಬಾ ಹೆಮ್ಮೆಯಿಂದ ಲೇಖಕಿ ಅಭಿವ್ಯಕ್ತಿಸಿದ್ದಾರೆ. ಏಕಾಂತ ಸುಖವನ್ನು ಅನುಭವಿಸಲು ಯಾವುದೇ ಖರ್ಚು, ಶ್ರಮ, ಮತ್ತೊಬ್ಬರ ಸಹಾಯದ ಅಗತ್ಯವಿಲ್ಲ. ಬದಲಿಗೆ ಅನುಭವಿಸುವ ಬಯಕೆ ಮತ್ತು ಮನಸ್ಸು ಇರಬೇಕೆನ್ನುವುದು ಲೇಖಕಿಯ ಅಭಿಮತ. ಇವರು ಬಯಸುವ ಈ ಏಕಾಂತ "ಕವಿಗಳೋ ಮುನಿಗಳೋ ಇಚ್ಛಿಸುವ, ಮುಳುಗುವ ಸೂರ್ಯನನ್ನೋ ಉದಯಿಸುವ ಚಂದ್ರನನ್ನೋ ನೋಡುತ್ತಾ ಕುಳಿತು ಬಿಡುವ ಏಕಾಂತವಲ್ಲ. ನನಗಾಗಿ ಮತ್ತು ನನಗಾಗಿ ಮಾತ್ರ, ನಾನು ಮತ್ತು ನಾನು ಮಾತ್ರ ಮಾಡಬಹುದಾದ ಅನೇಕ ಕೆಲಸಗಳನ್ನು ನನಗೆ ಹೇಗೆ ಬೇಕೋ ಹಾಗೆ ಮಾಡಿಕೊಳ್ಳುವ ಸುವರ್ಣ ಅವಕಾಶವನ್ನು ಕಲ್ಪಿಸಿ ಕೊಡುವ ಸುಖವನ್ನು ಏಕಾಂತ ಸುಖ"[1] ಎಂದು ಕರೆದಿದ್ದಾರೆ. ಈ ಏಕಾಂತ ಸುಖದ ಪರಿಕಲ್ಪನೆಯನ್ನು ಲೇಖಕಿಯು ಮಕ್ಕಳಿಂದ ಹಿಡಿದು ವಯಸ್ಕರವರೆಗೂ ಅನುಭವಾತ್ಮಕ ನೆಲೆಯಲ್ಲಿ ಸಮಾಜಮುಖಿಯಾಗಿ ಪ್ರಬಂಧದುದ್ದಕ್ಕೂ ವಿಶೇಷ ಅರ್ಥಗಳನ್ನು ಧ್ವನಿಸುವಂತೆ ಕಟ್ಟಿಕೊಟ್ಟಿರುವುದು ವರ್ತಮಾನದಲ್ಲಿನ ಅನೇಕ ಸಮಸ್ಯೆಗಳಿಗೆ ಪರಿಹಾರವಾಗಿದೆ.

ಈ ಪ್ರಬಂಧದಲ್ಲಿ ಮಕ್ಕಳು ಏಕಾಂತವನ್ನು ಸಹಜವಾಗಿ ಯಾವ ಬಗೆಯಲ್ಲಿ ಇಚ್ಛಿಸುತ್ತಾರೆ ಎನ್ನುವುದನ್ನು ಲೇಖಕಿ ತಮ್ಮ ಬಾಲ್ಯದ ಅನುಭವವನ್ನು ಹೇಳುವುದರ ಮೂಲಕ ವ್ಯಕ್ತಪಡಿಸಿದ್ದಾರೆ. ಮಕ್ಕಳು ಸಹಜವಾಗಿ ಕುತೂಹಲ ಜೀವಿಗಳು. ಆದರೆ ಸಾಮಾನ್ಯವಾಗಿ ಮನೆಯ ಯಾವುದೇ ವಸ್ತುವನ್ನು ಮುಟ್ಟುವ, ಅನುಭವಿಸುವ ಅವಕಾಶಗಳು ಮಕ್ಕಳಿಗೆ ಕಡಿಮೆ. ಇಂತಹ ಸಂದರ್ಭದಲ್ಲಿ ಲೇಖಕಿಯ ತುಂಬು ಕುಟುಂಬವು ಕಾರ್ಯನಿಮಿತ್ತ ಹೊರಗಡೆ ಹೋಗುವಂತಾದಾಗ, ಏಕಾಂತದ ಅವಕಾಶಕ್ಕಾಗಿ ಕಾಯುತ್ತಿದ್ದ ಇವರು

ಯಾವುದೋ ನೆಪ ಹೇಳಿ ಮನೆಯಲ್ಲಿ ಉಳಿದರು. ಮನೆಯವರೆಲ್ಲಾ ಮನೆಯಿಂದ ಹೊರಡುತ್ತಿದ್ದಂತೆ ಏಕಾಂತದಲ್ಲಿದ್ದಾಗ ಮಾಡಬೇಕೆಂದುಕೊಂಡಿದ್ದ ಚಟುವಟಿಕೆಗಳು ಪ್ರಾರಂಭ. ಮೊದಲು ಎಂದೂ ಪ್ರವೇಶವಿಲ್ಲದ ತನ್ನ ಅಣ್ಣನ ರೂಮಿಗೆ ಧಾವಿಸಿ ಅಲ್ಲಿನ ಆಕರ್ಷಕ ವಸ್ತುಗಳಾದ ಫೋಟೋ, ಕೀಬಂಚುಗಳೊಂದಿಗೆ ಆಟವಾಡಿ, ನಂತರ ಅಕ್ಕನ ಕೊಠಡಿಗೆ ಲಗ್ಗೆ. ಅಲ್ಲಿ ಬಗೆ ಬಗೆಯ ಕ್ರೀಮು, ಸೆಂಟುಗಳ ಬಗೆಗಿನ ಹೆಣ್ಣಿನ ಸಹಜ ಕುತೂಹಲ ತೆರೆದುಕೊಳ್ಳುತ್ತದೆ. ನಂತರ ಎಂದೂ ಸ್ಪರ್ಶಿಸದ ಅಪ್ಪನ ಕನ್ನಡಕ ಹಾಕಿಕೊಂಡು ಕುರ್ಚಿಯಲ್ಲಿ ಕುಳಿತು ಮೇಷ್ಟ್ರನ್ನು ಅನುಕರಿಸುವುದರ ತನ್ಮಯತೆಯಲ್ಲಿ ಸ್ವರ್ಗವೇ ಸಿಕ್ಕಿದಂತಾಗುತ್ತದೆ. ಅಷ್ಟೆ ಅಲ್ಲದೆ ಅಜ್ಜಿಯ ಜಪದ ಸರವನ್ನು ಕೈಗೆ ಸುತ್ತಿಕೊಂಡು, ಸೈಕಲ್ ಡೈನಮೋವನ್ನು ಜೋರಾಗಿ ತಿರುಗಿಸುವುದು ಮುಂತಾದ ಚಟುವಟಿಕೆಗಳಲ್ಲಿ ಸಮಯದ ಪರಿವೇ ಇಲ್ಲದೆ ತಲ್ಲೀನರಾಗಿದ್ದಾಗ ಮನೆಮಂದಿಯೆಲ್ಲರ ಆಗಮನವು ಅಸಮಾಧಾನವನ್ನುಂಟು ಮಾಡುತ್ತದೆ.

ಹಿಂದಿನ ಅವಿಭಕ್ತ ಕುಟುಂಬಗಳಲ್ಲಿ ಕುಟುಂಬ ಸದಸ್ಯರ ಸಂಖ್ಯೆ ಹೆಚ್ಚು ಇದ್ದ ಕಾರಣ ಏಕಾಂತ ದೊರಕುವುದು ವಿರಳವಾಗಿತ್ತು. ಇಂತಹ ಸಂದರ್ಭದಲ್ಲಿ ಗುಂಪಿನಲ್ಲಿದ್ದಾಗ ಮಾಡಲಾಗದ ಕೆಲಸ ಕಾರ್ಯಗಳನ್ನು ಒಬ್ಬರೇ ಇದ್ದಾಗ ಮಾಡಲು ಇಚ್ಛಿಸುವುದು ಸಹಜ. ಏಕೆಂದರೆ ಸಮಾಜದ ಒಂದು ಭಾಗ ಕುಟುಂಬವೇ ಆಗಿರುವುದರಿಂದ ಕುಟುಂಬ ಮತ್ತು ಸಮಾಜದೊಂದಿಗೆ ನಾಗರಿಕ ಪ್ರಜ್ಞೆಯನ್ನಿಟ್ಟುಕೊಂಡು ಬದುಕಬೇಕಾಗುತ್ತದೆ. ಅದರಲ್ಲೂ ಪುರುಷರಿಗಿಂತ ಹೆಣ್ಣು ಮಕ್ಕಳಿಗೆ ನಮ್ಮ ಸಮಾಜ ಹಿಂದಿನಿಂದಲೂ ರೀತಿ–ರೀವಾಜನ್ನು ಹೇರಿ, ಕೆಲವು ಸ್ವಾತಂತ್ರ್ಯವನ್ನು ನಿರಾಕರಿಸಿದೆ. ಹಾಗಾಗಿ ಮನುಷ್ಯನ ಸಹಜ ಸ್ವಭಾವ; ನಮಗೆ ಯಾವುದರ ಕೊರತೆ ಇದೆಯೋ ಅದರತ್ತ ಒಲವು ತೋರುವುದು ಸಾಮಾನ್ಯ.

ಹಿಂದೆ ಮಾಧ್ಯಮಗಳು ಹಾಗೂ ತಂತ್ರಜ್ಞಾನದ ಹಾವಳಿ ಇರಲಿಲ್ಲ. ಹಾಗಾಗಿ ಕಲಿಕೆಯು ಕೌಶಲ್ಯ ಭರಿತ ಚಟುವಟಿಕೆಯಿಂದ ಸದಾ ಕೂಡಿರುವಂತ ವಾತಾವರಣವಿರುತ್ತಿತ್ತು. ಇತ್ತೀಚಿನ ದಿನಗಳಲ್ಲಿ ವಿಭಕ್ತ ಕುಟುಂಬಗಳೇ ಹೆಚ್ಚು ಇರುವುದರ ಜೊತೆಗೆ ಉದ್ಯೋಗಕ್ಕಾಗಿ ನಗರ ಪ್ರದೇಶಗಳನ್ನು ಹರಸಿ ಬರುತ್ತಾರೆ. ಇಂತಹ ಸಂದರ್ಭದಲ್ಲಿ ಯಾಂತ್ರಿಕ ಜೀವನ ಅನಿವಾರ್ಯವಾದಾಗ ಮಕ್ಕಳ ಕಡೆಗೆ ಹೆಚ್ಚು ಗಮನವನ್ನು ಕೊಡಲು ಸಾಧ್ಯವಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ಇಂದು ಮಕ್ಕಳಿಗೆ ಏಕಾಂತ ಸಮಯ ಸಿಕ್ಕರೆ ಸಾಕು ತಂತ್ರಜ್ಞಾನದ ಪ್ರಭಾವದಿಂದ ಕಲಿಕೆಗೆ ಸಂಬಂಧಿತ ಕುತೂಹಲ ಕಡಿಮೆಯಾಗಿ ಟಿವಿ, ಮೊಬೈಲ್‌ನಂತಹ ಮಾಧ್ಯಮಗಳಲ್ಲಿ ಸಮಯವನ್ನು ಹಾಳು ಮಾಡುತ್ತಾರೆ. ಆದ್ದರಿಂದ ಮಕ್ಕಳಿಗೆ ಮಾನಸಿಕ ಮತ್ತು ದೈಹಿಕ ಆರೋಗ್ಯ ಕ್ಷೀಣಿಸುವುದಲ್ಲದೆ ಮನೆಯಲ್ಲೆ ಮೂಲಭೂತವಾಗಿ ಕಲಿಯಬಹುದಾದ ಕಲಿಕೆಯ ಮಟ್ಟ ಕ್ಷೀಣಿಸುತ್ತದೆ. ಇದರಿಂದ ಮನೆಯೇ ಮೊದಲ ಪಾಠಶಾಲೆ ಎಂಬ ಮೌಲ್ಯಯುತ ತತ್ವವು ಸಂಕುಚಿತಗೊಳ್ಳುತ್ತದೆ. ಒಟ್ಟಿನಲ್ಲಿ ಇಂದಿನ ಆಧುನಿಕ ಮತ್ತು ತಂತ್ರಜ್ಞಾನ ಮನುಷ್ಯನ ಏಕಾಂತ ಸುಖವನ್ನು ಕಸಿದುಕೊಂಡಿದೆ.

ಲೇಖಕಿಯು ತಮ್ಮ ಬಾಲ್ಯದಲ್ಲಿದ್ದಾಗ ಅಸಮಾಧಾನ ತರುವ ಮತ್ತೊಂದು ಸಂಗತಿಯೆಂದರೆ ಮನೆಯವರಲ್ಲದ ನೆಂಟರು ಮತ್ತು ಅವರ ಮಕ್ಕಳು ತಮ್ಮ ಮನೆಗೆ ಬಂದು ಒಂದಷ್ಟು ದಿನ ಉಳಿಯುವುದು. ಕಾರಣ ಅವರ ಮಕ್ಕಳು ಸದಾ ಹಿಂದೆ–ಮುಂದೆ ಸುಳಿದಾಡುವುದು, ಎಲ್ಲಿ ಹೋದರೂ ಹಿಂಬಾಲಿಸುವುದು ಹಾಗೂ ಮಕ್ಕಳು ತೀರ ಸಣ್ಣವರಾಗಿದ್ದು ಅಳತೊಡಗಿದರೆ, ಅವರಿಗೆ ನಾಯಿಮರಿ, ಕೋತಿಗಳನ್ನು ತೋರಿಸಿ ಸಮಾಧಾನಿಸು ಎಂಬ ಕೆಲಸವನ್ನು ವಹಿಸುವುದು. ಅಷ್ಟೆ ಅಲ್ಲದೆ ಈ ನೆಂಟರೆಂಬ ಬುದ್ಧಿವಂತರು ನೀನು ಎಷ್ಟು ಓದಿದಿಯಾ, ಮಗ್ಗಿ ಹೇಳು ಎಂಬ ಮುಂತಾದ ಪ್ರಶ್ನೆಗಳನ್ನು ಕೇಳುವುದನ್ನು ಸಹಿಸಿಕೊಳ್ಳುವುದು

ಕಷ್ಟವಾಗುತ್ತಿತ್ತು. ಆದ್ದರಿಂದ ಅಮ್ಮನ ಬಳಿ ಹೋಗಿ ನೆಂಟರೆಲ್ಲಾ ಹೊರಡುವುದು ಯಾವಾಗ ಎಂದು ಕೇಳಿ ಬೈಸಿಕೊಳ್ಳುವ ಸಂದರ್ಭಗಳೂ ಬರುತ್ತಿದ್ದವು.

ಬಾಲಕಿಯಾಗಿದ್ದ ಲೇಖಕಿ ನೇರವಾಗಿ ಸಂಬಂಧಿಕರ ಎದುರು ತನ್ನ ಅಸಮಾಧಾನ ವ್ಯಕ್ತಪಡಿಸದೆ ತನ್ನ ತಾಯಿಯ ಮುಂದೆ ತನ್ನ ಅಳಲನ್ನು ವ್ಯಕ್ತಪಡಿಸುತ್ತಾರೆ. ಆ ಮಗುವಿಗಿರುವ ಸಂಸ್ಕಾರ ಮನೆಗೆ ಬಂದ ಅಥಿತಿಗಳಿಗಿಲ್ಲ. ಇಲ್ಲಿ ನೆಂಟರು ಮತ್ತು ಅವರ ಮಕ್ಕಳ ಬಗ್ಗೆ ಅಸಹನೆ ತೋರುತ್ತಿದ್ದಾರೆ ಎಂದರೆ ಅವರು ನಡೆಸಿಕೊಂಡ ಪರಿಯೂ ಕಾರಣವಾಗಿರುತ್ತದೆ. ಮನೆಗೆ ಬಂದ ನೆಂಟರು ಎಷ್ಟೆ ಬುದ್ಧಿಜೀವಿಗಳಾದರೂ ಮಕ್ಕಳೊಂದಿಗೆ ಮಕ್ಕಳಾಗಿಯೇ ಇರಬೇಕೆಂಬ ಹಿರಿಯರ ಮಾತು ಇಲ್ಲಿ ಪ್ರಸ್ತುತವಾಗಿದೆ. ಮುಗ್ಧರಾದ ಮಕ್ಕಳ ಮನಸ್ಥಿತಿಯನ್ನು ಮೊದಲು ಅರ್ಥೈಸಿಕೊಳ್ಳಬೇಕು. ಆಗ ಮಕ್ಕಳೊಂದಿನ ಜಗತ್ತು ಆಹ್ಲಾದಕರವಾಗಿರುತ್ತದೆ. ಅಷ್ಟೇ ಅಲ್ಲದೆ ಮಕ್ಕಳಿಗೂ ಕೂಡ ಸಂಬಂಧಗಳ ಮೌಲ್ಯವನ್ನು ತಿಳಿಸುವುದರ ಜೊತೆಗೆ ಸಮಯ ಸಂದರ್ಭಕ್ಕೆ ತಕ್ಕಂತೆ ನಡೆದುಕೊಳ್ಳುವ ಪರಿಪಾಠವನ್ನು ಬೆಳೆಸುವುದು ಅವಶ್ಯಕವಾಗಿದೆ.

ಇನ್ನು ಹದಿಹರೆಯವನ್ನು ದಾಟುತ್ತಿದ್ದಂತೆ ಹೆಣ್ಣು ಮಕ್ಕಳು ತಮ್ಮ ಇಚ್ಛಿತ ಉನ್ನತ ವ್ಯಾಸಂಗ ಅಥವಾ ನೌಕರಿಯನ್ನು ಪಡೆಯಬೇಕೆಂಬ ಜವಬ್ದಾರಿ ಬಂದಾಗ ಅನೇಕ ಸವಾಲುಗಳು ಎದುರಾಗುತ್ತವೆ. ಈ ಜವಬ್ದಾರಿ ನಿರ್ವಹಣೆಗಾಗಿ ಪಟ್ಟಣದಲ್ಲಿ ಪ್ರತ್ಯೇಕ ಮನೆಯಲ್ಲಿರಬೇಕೆಂದು ಬಯಸಿದರೆ ಒಬ್ಬರನ್ನೇ ಮುಕ್ತವಾಗಿ ಬಿಡಲು ಸಾಕಷ್ಟು ಕುಟುಂಬಗಳು ಒಪ್ಪುವುದಿಲ್ಲ. ಇದಕ್ಕೆ ಮಗಳ ಮೇಲಿನ ಕಾಳಜಿ ಅಥವಾ ಸಮಾಜದ ಮೇಲಿನ ಭಯ ಕಾರಣವಿರಬಹುದು. ಹಾಗಾಗಿ ಆ ಹೆಣ್ಣಿಗೆ ಏಕಾಂತವಾಗಿ ಜೀವಿಸುವ ಮನದಾಸೆ ಇದ್ದರೂ ಬಂಧುಗಳು ಅಥವಾ ಸ್ನೇಹಿತರೊಂದಿಗೆ ಜೊತೆಯಲ್ಲಿ ಇರಬೇಕಾಗುತ್ತದೆ. ಈ ಅನುಭವ ಲೇಖಕಿಯನ್ನು ಬಿಟ್ಟಿಲ್ಲ. ಹಾಗಾಗಿ ಅಣ್ಣನೊಂದಿಗೆ ಉಳಿದುಕೊಂಡು ವ್ಯಾಸಂಗ ಮಾಡುವ ಸನ್ನಿವೇಶವು ಒದಗಿ ಬಂತು. ತನ್ನ ಅಣ್ಣ ಕೆಲಸಕ್ಕೆ ಹೋಗಿ ಮನೆಗೆ ಬರುವವರೆಗೂ 'ಏಕಾಂತ ಗೃಹದ ರಾಣಿ' ನಾನೇ ಆಗಿರುತ್ತೇನೆ ಎಂಬ ಖುಷಿ ಲೇಖಕಿಯದ್ದಾಗಿತ್ತು. ಇವರು ಕಾಲೇಜಿನಿಂದ ಮನೆಗೆ ಬರುತ್ತಲೇ ಪುಸ್ತಕ ಬಿಸಾಕಿ ತನಗೆ ತಾನೆ ಸಂಭಾಷಣೆ ಮಾಡಿಕೊಳ್ಳುತ್ತಾ ತಿಂಡಿ–ತೀರ್ಥ ತಯಾರು ಮಾಡುವುದು. ನಂತರ ದಿವ್ಯ ಆರಾಮಿನ ರೀತಿಯಲ್ಲಿ ಕುಳಿತು ಆಹಾರ–ಪಾನೀಯಗಳನ್ನು ಸೇವಿಸುತ್ತಾ, ಪಾಠ ಮಾಡಿದ ಲೆಕ್ಚರುಗಳೆಲ್ಲರ ಮುಖಭಾವನ್ನು ನೆನೆಸಿಕೊಂಡು ಅಣಕಿಸುತ್ತಾ ಏಕಪಾತ್ರಾಭಿನಯ ಮಾಡುವುದು.. ಇವು ಅಭ್ಯಾಸವಾದಾಗ ಇದೇ ವಿಶ್ರಾಂತಿಯ ಭಾವವನ್ನು ತಂದುಕೊಡುತಿತ್ತು. ಈ ಚಟುವಟಿಕೆಗಳನ್ನು ಬೇರೆ ಯಾರಾದರೂ ನೋಡಿದರೆ ಮಂಡೆ ಸಮವಿಲ್ಲ ಎಂದು ನಿರ್ಧರಿಸಿಬಿಡುತ್ತಿದ್ದರು ಎಂಬ ವಾಸ್ತವ ಸಂಗತಿ ಲೇಖಕಿಗೆ ತಿಳಿದಿತ್ತು.

ಸದಾ ಕಾಲ ಜೊತೆಗಿರುವ ಮನೆಯ ಸದಸ್ಯರಾದ ಅಣ್ಣ ಮತ್ತು ಇತರರಿಗೆ ಹೆಣ್ಣಿನ ಮನೋಭಾವ ಅರ್ಥವಾಗಲಿಲ್ಲ ಎಂದ ಮೇಲೆ ಹೊರಗಿನ ಸಮಾಜಕ್ಕೆ ಅರ್ಥವಾಗುವುದು ದೂರದ ಮಾತು. ಆದರೆ ವರ್ತಮಾನದಲ್ಲಿ ಏಕಾಂತವನ್ನು ಅನುಭವಿಸುವ ಪರಿಯೇ ಬದಲಾಗಿದೆ. ಒಮ್ಮೊಮ್ಮೆ ಮನೆಯ ಸದಸ್ಯರು ಇರುವಾಗಲೇ ಮಾಧ್ಯಮಗಳ ಗೀಳಿನಿಂದ ಮಾಧ್ಯಮ ಬಳಕೆದಾರರಿಗಾಗಲಿ ಮತ್ತು ಮನೆಯ ಸದಸ್ಯರಿಗಾಗಲಿ ತಾವು ಏನು ಮಾಡುತ್ತಿದ್ದೇವೆ ಎನ್ನುವುದನ್ನು ಅರಿಯುವುದು ಕಷ್ಟವಾಗಿದೆ. ಇದರಿಂದ ಖಿನ್ನತೆ, ಆರೋಗ್ಯ ಸಮಸ್ಯೆಯ ಜೊತೆಗೆ ಮೌಲ್ಯಯುತ ಸಮಯವನ್ನು ಸರಿಯಾಗಿ ಬಳಸಿಕೊಳ್ಳಲಾಗದೆ ಸುಂದರ ಜೀವನವನ್ನು ನಶ್ವರಗೊಳಿಸಿಕೊಳ್ಳುತ್ತಿರುದು ಶೋಚನೀಯ ಸಂಗತಿಯಾಗಿದೆ. ಇದರಿಂದ ಸಾಕಷ್ಟು ಕುಟುಂಬಗಳು ತಮ್ಮ ನೆಮ್ಮದಿಯನ್ನು ಹಾಳು ಮಾಡಿಕೊಂಡಿರುವುದನ್ನು ಪತ್ರಿಕೆ, ಮಾಧ್ಯಮಗಳಲ್ಲಿ ಕಾಣಬಹುದು. ಹಾಗಾಗಿ ಸಂಬಂಧಗಳು ಪರಸ್ಪರ

ಅರ್ಥ ಮಾಡಿಕೊಂಡು ಜೀವಿಸುವುದು ಅಗತ್ಯವಾಗಿದೆ. ಏಕೆಂದರೆ ಕುಟುಂಬ ಕುಟುಂಬಗಳು ಸೇರಿ ಸಮಾಜ ನಿರ್ಮಾಣವಾಗುವುದರಿಂದ ಕೌಟುಂಬಿಕವಾಗಿ ಉತ್ತಮ ವಾತಾವರಣ ಕಾಪಾಡಿಕೊಳ್ಳುವುದು ತೀರ ಅವಶ್ಯವಾಗಿದೆ.

ಏಕಾಂತವನ್ನು ಏಕಾಂತ ಸುಖವನ್ನಾಗಿಸುವ ಇನ್ನಷ್ಟು ರಸಮಯ ಅನುಭವಗಳನ್ನು ಮನಸ್ಸು ಬಿಚ್ಚಿ ಲೇಖಕಿಯು ಹೇಳಿಕೊಂಡಿದ್ದಾರೆ. ಆದರೆ ಇದನ್ನು ಮನುಷ್ಯ ಸುಳ್ಳು ನಾಗರಿಕತೆಯ ದೃಷ್ಟಿಕೋನದಲ್ಲಿ ನೋಡುವ ಬದಲು ಮುಕ್ತ ಮನಸ್ಸಿನಿಂದ ನೋಡಬೇಕು ಎಂದಿದ್ದಾರೆ. ಆಗ ಕಾಲಕ್ಕನುಗುಣವಾಗಿ ಬಟ್ಟೆಗಳನ್ನು ಧರಿಸಿ ಕುಳಿತು ಅಥವಾ ಮಲಗಿಯೋ ಓದು–ಬರೆಹವನ್ನು ಮಾಡಬಹುದು. ತನ್ನಿಚ್ಛೆಯಂತೆ ಹಾಡಿ ನಲಿಯಬಹುದು. ಯಾರ ಭಯವಿಲ್ಲದೆ ಭಾಷಣ ಮಾಡಬಹುದು. ಹಾಗೆಯೇ ಓಡಾಡುತ್ತಾ ಚಮಚದಿಂದ ಕಾಫಿ ಕುಡಿಯುವುದು, ರೇಡಿಯೋವನ್ನು ಕಾಲಿನಿಂದ ಆಫ್ ಮಾಡುವುದು ಮುಂತಾದ ಚಟುವಟಿಕೆಗಳು ಏಕಾಂತ ಸುಖಕ್ಕಾಗಿ ತೆರೆದುಕೊಳ್ಳುತ್ತವೆ. ಆದರೆ ಅನುಭವಿಸುವ ಮನಸ್ಸು ಇರಬೇಕು ಅಷ್ಟೆ ಎನ್ನುವುದು ಲೇಖಕಿಯ ಅಭಿಮತ.

ಇಂತಹ ಚಟುವಟಿಕೆಗಳು ವೈಯಕ್ತಿಕವಾಗಿ ಅಥವಾ ಕುಟುಂಬ, ಸಮಾಜಕ್ಕಾಗಲಿ ಯಾವುದೇ ತೊಂದರೆಯಾಗದು. ಇತ್ತೀಚಿನ ದಿನಗಳಲ್ಲಿ ಏಕಾಂತವನ್ನು ಏಕಾಂತ ಸುಖವಾಗಿ ಮಾರ್ಪಡಿಸಿಕೊಳ್ಳುವುದರ ಬದಲು ನಾನು ಒಬ್ಬಂಟಿ, ನನಗೆ ಯಾರು ಇಲ್ಲ, ನಾನು ಏಕಾಂಗಿ ಎನ್ನುತ್ತಾ ತನಗೆ ತಾನೆ ಸಂಕಷ್ಟಕ್ಕೆ ದೂಡಿಕೊಳ್ಳುತ್ತಿರುವವರು ಹೆಚ್ಚು. ಹೀಗಿರುವಾಗ ಲೇಖಕಿಯ ಈ ಅನುಭವಾತ್ಮಕ ಮಾತುಗಳು ಹಲವರಿಗೆ ಪ್ರೇರಣೆಯಾಗಬಹುದು.

ಹೆಚ್ಚಿನ ವಿದ್ಯಾಭ್ಯಾಸವನ್ನು ಮಾಡಲು ಇನ್ನೊಂದು ಮಾರ್ಗವೆಂದರೆ ನಗರ ಪ್ರದೇಶದ ಹಾಸ್ಟೆಲಿನಲ್ಲಿ ಉಳಿದುಕೊಳ್ಳುವುದು. ಇಂತಹ ಸಂದರ್ಭದಲ್ಲಿ ಕಾಲೇಜು ಮತ್ತು ಹಾಸ್ಟೆಲಿನಲ್ಲಿ ಏಕಾಂತಕ್ಕಾಗಿ ಚಡಪಡಿಸಿದ ಕ್ಷಣಗಳನ್ನು ಲೇಖಕಿಯು ಈ ಪ್ರಬಂಧದಲ್ಲಿ ಹಂಚಿಕೊಂಡಿದ್ದಾರೆ. ನಾಗರಿಕ ಸಮಾಜದ ಭಾಗವಾದ ಕಾಲೇಜಿಗೆ ಹೋದಾಗ; ಕಾಲುಗಳನ್ನು ಜೋತಾಡಿಸಿಕೊಂಡು, ಬೆನ್ನು ಕುತ್ತಿಗೆ ನೆಟ್ಟಗೆ ಮಾಡಿಕೊಂಡು ಕುಳಿತುಕೊಳ್ಳಬೇಕು. ಪೆನ್ನು, ಸ್ಕೇಲುಗಳನ್ನು ಕೈಯಲ್ಲೇ ಹಿಡಿದುಕೊಳ್ಳಬೇಕೇ ಹೊರತು ಬೇಜಾರಾಗಿ ಕಿವಿಗೊ, ಕನ್ನಡಕದ ಪ್ರೇಮಿಗೊ ಸಿಕ್ಕಿಸಿಕೊಳ್ಳುವ ಹಾಗಿಲ್ಲ. ಇಷ್ಟೆಲ್ಲಾ ನಾಗರಿಕ ಕಟ್ಟುಪಾಡುಗಳಿಂದ ಬೇಸತ್ತ ಮನಸ್ಸು ಹಾಸ್ಟೆಲಿಗೆ ಹೋಗಿ ಏಕಾಂತವಾಗಿ ವಿಶ್ರಮಿಸಬೇಕು ಎಂದಾಗ ಅಲ್ಲೂ ಬೇಸರ. ಸ್ನೇಹಿತೆಯರು ವಿರಾಜಮಾನವಾಗಿ ಮಲಗಿ ಕೆಲವರು ನಿದ್ರಿಸುತ್ತಿದ್ದರೆ, ಇನ್ನು ಕೆಲವರು ವಿಶ್ರಾಂತಿ ಪಡೆಯುತ್ತಿರುತ್ತಾರೆ. ಒಮ್ಮೆ ಸ್ನೇಹಿತೆಯು ನಿದ್ರಿಸುತ್ತಿದ್ದಾಳೆ ಎಂದು ಭಾವಿಸಿ, ಏಕಾಂತದ ಭಾವವನ್ನು ತಂದುಕೊಂಡು ವರ್ತಿಸಿದ ಸಂದರ್ಭದಲ್ಲಿ ಆಗುವ ಕಸಿವಿಸಿಯನ್ನು ವ್ಯಕ್ತಪಡಿಸಿದ್ದಾರೆ. ಸ್ನೇಹಿತೆಯು ಮಲಗಿದ್ದಾಳೆ ಎಂದು ಭಾವಿಸಿ; ಕುರ್ಚಿಯ ಮೇಲೆ ಕುಳಿತು, ಕಾಲನ್ನು ಟೇಬಲಿನ ಮೇಲಿಟ್ಟು ಕಾಫಿ ಕುಡಿಯುತ್ತಾ, ಭಾನುವಾರದ ರಜಾ ದಿನದ ಯೋಜನೆಯ ಪಟ್ಟಿಯನ್ನು ಕನ್ನಡದಲ್ಲಿ ಆಲೋಚಿಸಿ ಬೇಸರವಾಗಿದೆ ಎಂದು 'ಆಂಗ್ಲೋ್ಯಚನೆ'ಯಲ್ಲಿ ಮಾತನಾಡಿಕೊಳ್ಳುತ್ತಿದ್ದ ಸಂದರ್ಭದಲ್ಲಿ ರೂಮಿನಲ್ಲಿ ಯಾರೋ ನಕ್ಕಂತಾದಾಗ ರಸಭಂಗದ ಜೊತೆಗೆ ಕೋಪವು ಬರುತ್ತದೆ. ಆಗ ಒಂದು ತೀರ್ಮಾನಕ್ಕೆ ಬಂದು, ವಾರ್ಡನ್ನಿನ ಅನುಮತಿಯ ಮೇರೆಗೆ ಸಂಶೋಧನಾ ವಿದ್ಯಾರ್ಥಿನಿಯನ್ನು ರೂಮೇಟ್ಟಾಗಿಸಿಕೊಳ್ಳಲಾಯಿತು. ಇವರು ಸಂಶೋಧನೆ ಎಂದುಕೊಂಡು ಹೆಚ್ಚು ಹೊರಗೆ ಇರುತ್ತಿದ್ದರಿಂದ ಏಕಾಂತ ಸುಖಕ್ಕಿದ್ದ ವಿಘ್ನಗಳನ್ನು ದೂರವಾಗಿಸಿಕೊಳ್ಳಲಾಯಿತು.

ಲೇಖಕಿಯು ಏಕಾಂತವನ್ನು ಇಷ್ಟೊಂದು ಬಯಸುತ್ತಿದ್ದಾರೆ ಎಂದರೆ ಅದರ ಬಗೆಗಿನ ಧನಾತ್ಮಕ ಚಿಂತನೆ ಮತ್ತು ಉತ್ತಮ ಹವ್ಯಾಸಗಳೇ ಕಾರಣ. ಇದು ಕೂಡ ನಮ್ಮ ವ್ಯಕ್ತಿತ್ವವನ್ನು ರೂಪಿಸಬಲ್ಲದು. ಇತ್ತೀಚಿನ ದಿನಗಳಲ್ಲಿ ಅನಿವಾರ್ಯವಾಗಿ ಏಕಾಂತದ

ದಿನಗಳು ಬಹುತೇಕರಿಗೆ ಲಭಿಸುತ್ತವೆ. ಇದನ್ನು ಧನಾತ್ಮಕವಾಗಿ ಪರಿಗಣಿಸಿದಾಗ ಉತ್ತಮ ಫಲವೇ ಲಭಿಸುತ್ತದೆ ಎನ್ನುವುದಕ್ಕೆ ಅನೇಕ ನಿದರ್ಶನಗಳನ್ನು ಕೊಡಬಹುದು. ಸ್ವಾಮಿ ವಿವೇಕಾನಂದರ ಧ್ಯಾನ, ಅಧ್ಯಯನಶೀಲತೆ, ಲೋಕ ಸಂಚಾರ ಮತ್ತು ಕುವೆಂಪು ಅವರ ಪ್ರಕೃತಿ ಪ್ರೇಮ ಮತ್ತು ಅಧ್ಯಯನಶೀಲತೆ ಹಾಗೂ ಋಷಿಗಳ ಆಧ್ಯಾತ್ಮಿಕ ಚಿಂತನೆ ಹೀಗೆ ಇನ್ನು ಹಲವು ಸಾಧನಾಶೀಲ ಪ್ರಕ್ರಿಯೆಯು ಏಕಾಂತದಲ್ಲೇ ಲಭಿಸಿರುವಂತದ್ದನ್ನ ಸಾಕಷ್ಟು ಗುರುತಿಸಬಹುದು. ಹಾಗಾಗಿ ಏಕಾಂತವನ್ನು ಸ್ವೀಕರಿಸುವುದರ ಮನಸ್ಥಿತಿಯ ಮೇಲೆ ಅದು ವರವಾಗಿಯೋ ಅಥವಾ ಶಾಪವಾಗಿಯೋ ರೂಪುಗೊಳ್ಳುತ್ತದೆ ಎನ್ನುವುದು ವಾಸ್ತವ.

ಲಲಿತ ಪ್ರಬಂಧಕ್ಕೆ ಪೂರಕವಾಗಿ ವರ್ತಮಾನವನ್ನು ಕುರಿತು ಹೇಳುವುದಾದರೆ; ಹದಿಹರೆಯದವರ ಅಂದರೆ ಯುವಕ–ಯುವತಿಯರ ಕುರಿತ ವಿಚಾರ ಸೂಕ್ಷ್ಮವಾದ ವಿಚಾರವಾಗಿದೆ. ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕಾದ ಹಂತ ಇದಾಗಿದೆ. ಹಾಗಾಗಿ ಈ ವಯೋಮಾನದವರನ್ನು ಸ್ನೇಹಿತರಂತೆ ಭಾವಿಸಿ, ಅವರ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಆಲಿಸಿ ಅಥವಾ ಗಮನಿಸಿ ಪರಿಹರಿಸುವುದು ಇಂದಿನ ದಿನಗಳಲ್ಲಿ ಮಹತ್ವದ ಸಂಗತಿಯಾಗಿದೆ. ಇಲ್ಲವಾದರೆ ವಯೋಸಹಜವಾಗಿ ಏಕಾಂತ ಕ್ಷಣ ದೊರೆತ ಸಂದರ್ಭದಲ್ಲಿ ಅನ್ಯ ಮಾರ್ಗಗಳನ್ನು ಅನುಸರಿಸುವುದು ಸಾಮಾನ್ಯವಾಗುತ್ತದೆ. ಇನ್ನು ಮುಂದುವರೆದರೆ ಫೇಸ್ಬುಕ್, ವಾಟ್ಸಪ್, ಇನ್ಸ್ಟ್ರಾಗ್ರಾಂ ಮೊದಲಾದ ಜಾಲತಾಣಗಳಲ್ಲಿ ಸಿಲುಕಿ ಅರಿತು–ಅರಿಯದೆಯೋ ಸಮಸ್ಯೆಗಳನ್ನು ಎಳೆದುಕೊಳ್ಳುತ್ತಾರೆ. ಹಾಗಾಗಿ ಪೋಷಕರು ಎಂತಹ ಒತ್ತಡದ ಬದುಕಾದರೂ ಮಕ್ಕಳಿಗಾಗಿ ಸ್ವಲ್ಪ ಸಮಯವನ್ನು ಮೀಸಲಿಡುವುದು ಅಗತ್ಯವಾಗಿದೆ. ಇಲ್ಲವಾದರೆ ಯಾರಿಗಾಗಿ ಯಾಂತ್ರಿಕ ಜೀವನವನ್ನು ದೂಡುತ್ತಿದ್ದಾರೋ ಅದು ವ್ಯರ್ಥವಾಗಬಹುದು. ಆಗ ಇಡೀ ಕೌಟುಂಬಿಕ ನೆಮ್ಮದಿಯೇ ದುಸ್ಥಿತಿಗೆ ಬರುವುದರಲ್ಲಿ ಸಂಶಯವಿಲ್ಲ. ಅಷ್ಟೇ ಅಲ್ಲದೆ ಈ ವಯಸ್ಸಿನಲ್ಲಿ ಸ್ನೇಹ ವರ್ಗವೂ ಕೂಡ ಉತ್ತಮವಾಗಿರಬೇಕಾಗುತ್ತದೆ. ಆಗ ಪೋಷಕರು ತಮ್ಮ ಅನುಪಸ್ಥಿತಿಯಲ್ಲಿಯೂ ನಿರಾಂತಕವಾಗಿ ಕೆಲಸ ನಿರ್ವಹಿಸಬಹುದು.

ಮತ್ತೊಂದು ವಿಚಾರವೆಂದರೆ ವಯಸ್ಸಾದ ವೃದ್ದರು. ಹೀಗಾಗಲೇ ಹೇಳಿದಂತೆ ವಿದ್ಯಾಭ್ಯಾಸಕ್ಕಾಗಿ ಅಥವಾ ವೃತ್ತಿಗಾಗಿ ಕುಟುಂಬವನ್ನು ತೊರೆದು ಪಟ್ಟಣ ಪ್ರದೇಶಕ್ಕೆ ಬರುವುದಾಗಿರುತ್ತದೆ. ಜೊತೆಗೆ ಮಕ್ಕಳು ತಮ್ಮ ಸ್ವಾರ್ಥಕ್ಕಾಗಿ ತಂದೆ ತಾಯಿಯನ್ನು ತೊರೆಯುತ್ತಿರುವುದು ಕೂಡ ಇತ್ತೀಚಿನ ದಿನಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತಿದೆ. ಇಂತಹ ಸಂದರ್ಭದಲ್ಲಿ ಏಕಾಂತತೆಯ ಕ್ಷಣಗಳು ಸಹಜವಾಗಿ ಗೋಚರಿಸುತ್ತವೆ. ಮಕ್ಕಳ ಮೇಲೆ ನಿರೀಕ್ಷೆ ಇಟ್ಟುಕೊಂಡವರು ಈ ಏಕಾಂತವನ್ನು ಖಿನ್ನತೆಗೊಳಪಡಿಸಿ ಆರೋಗ್ಯ ಮತ್ತು ನೆಮ್ಮದಿಯನ್ನು ಹಾಳು ಮಾಡಿಕೊಳ್ಳುತ್ತಾರೆ. ಹಾಗಾಗಿ ವಾಸ್ತವವನ್ನು ಅರ್ಥೈಸಿಕೊಂಡು ಏಕಾಂತದ ಸಮಯವನ್ನು ಒಳ್ಳೆಯ ಹವ್ಯಾಸಗಳಿಗೆ ವಿನಿಯೋಗಿಸಿಕೊಂಡು ಬದುಕನ್ನು ನೆಮ್ಮದಿಯಿಂದ ಅನುಭವಿಸುವುದು ಉತ್ತಮವಾದ ಮಾರ್ಗವಾಗಿದೆ.

ಒಟ್ಟಾರೆ ಲೇಖಕಿಯು ಎಲ್ಲಾ ವಯೋಮಾನದವರನ್ನು ಕುರಿತು ಹೇಳುವುದಾದರೆ; ಪ್ರತಿಯೊಬ್ಬ ಮನುಷ್ಯ ಸಂಘ ಜೀವನವನ್ನು ಬಯಸುವುದೇ ಆದರೆ ತನ್ನನ್ನು ಅರಿಯುವ, ತನ್ನ ಸ್ವಭಾವಕ್ಕೆ ಸಮಾನ ಅಭಿರುಚಿ ಇರುವವರನ್ನು ಬಯಸುವುದು ಸಹಜ. ಇಂತಹ ಸ್ನೇಹ ಬಂಧವನ್ನು ಸಂಪಾದಿಸಿ ಉಳಿಸಿಕೊಳ್ಳಲು ಇಷ್ಟಪಡುತ್ತಾರೆ. ಇದಕ್ಕೆ ಯಾವುದೇ ವಯಸ್ಸಿನ ಮಿತಿ ಅಡ್ಡಿ ಬರುವುದಿಲ್ಲ. ಆದರೆ ಸಮಾನ ಅಭಿರುಚಿಯುಳ್ಳ ವ್ಯಕ್ತಿತ್ವವು ಎಲ್ಲರಲ್ಲೂ ಇರದ ಕಾರಣ ಏಕಾಂತವನ್ನು ಬಯಸುವುದಾಗಿ ಪರೋಕ್ಷವಾಗಿ ಹೇಳಿದಂತಿದೆ. ಇನ್ನು ಕೆಲವರಿಗೆ ಏಕಾಂತವೇ ಜೀವನದಲ್ಲಿ ಬೇಸರವನ್ನು ತಂದೊಡ್ಡಿ ಜಿಗುಪ್ಸೆಗೊಂಡು ಜೀವನದ

ಪಥವೇ ಬದಲಾಗಿಬಿಡುತ್ತದೆ. ಲೇಖಕಿಗೆ ಇಂತವರನ್ನು ಕಂಡರೆ ಮರುಕ. ಕಾರಣ ಇಷ್ಟೆ, ಏಕಾಂತವನ್ನು ಅನುಭವಿಸಲು ಮತ್ತು ಇದರಲ್ಲಿರುವ ಸುಖವನ್ನು ಕಂಡುಕೊಳ್ಳಲು ವಿಫಲರಾಗುತ್ತಿದ್ದಾರಲ್ಲ ಎಂಬುದು. ಅದೇನೆ ಇರಲಿ ಹಾಡಲು, ಕುಣಿಯಲು, ನಗಲು–ಅಳಲು ಮುಂತಾದ ಚಟುವಟಿಕೆಗಳಿಗಾಗಿ ಶಿಷ್ಟಾಚಾರವಲ್ಲದ ಮುಕ್ತ ಸ್ವಾತಂತ್ರ್ಯಕ್ಕಾಗಿ ದೇವರಲ್ಲಿ ನಿತ್ಯ ಪ್ರಾರ್ಥಿಸುತ್ತೇನೆ ಎನ್ನುವುದು ಲೇಖಕಿಯ ಅಭಿಮತ.

ಭುವನೇಶ್ವರಿ ಹೆಗಡೆ ಅವರ ಈ ಲಲಿತ ಪ್ರಬಂಧ ಏಕಾಂತವನ್ನು ಅನುಭವಿಸುತ್ತಿರುವವರಿಗೆ ಬದುಕಿಗೊಂದು ಸ್ಫೂರ್ತಿಯನ್ನು, ಮಾರ್ಗದರ್ಶನವನ್ನು, ಅದರಲ್ಲಿಯ ಸುಖವನ್ನು ಕಂಡುಕೊಳ್ಳಲು ಸಲಹೆಯನ್ನು ನೀಡುತ್ತದೆ. ಇದಕ್ಕೆ ನಿದರ್ಶನವಾದ ಸಂಗತಿಯನ್ನು ಅವರು ಅಬ್ಬಿ ಅಮೆರಿಕ ಕ್ರಿಯೇಶನ್ ಅವರ 'ಅಬ್ಬಿ ಅಂತರಂಗ' ಮತ್ತು 'ಪ್ರತಿಲಿಪಿ' ಮುಂತಾದ ಕಾರ್ಯಕ್ರಮಗಳಲ್ಲಿ ಹಂಚಿಕೊಂಡಿದ್ದಾರೆ. ಒಬ್ಬ ಹೆಣ್ಣು ಮಗಳನ್ನು ಉಡುಪಿಯಿಂದ ಬಾಂಬೆಯ ಉದ್ಯೋಗಸ್ಥನಿಗೆ ಮದುವೆ ಮಾಡಿಕೊಟ್ಟಿರುತ್ತಾರೆ. ಹುಡುಗಿ ಸುಂದರವಾಗಿದ್ದ ಕಾರಣ ಆಕೆಯ ಗಂಡ ತನ್ನ ಹೆಂಡತಿಯನ್ನು ಹೊರಗೆ ಬಿಡದೆ ನೌಕರಿಗೆ ಹೋಗುವಾಗ ಮನೆಯ ಬೀಗ ಹಾಕಿಕೊಂಡು ಹೋಗುತ್ತಿದ್ದ. ಇದರಿಂದ ಸದಾ ಬೇಸರದಲ್ಲಿರುತ್ತಿದ್ದ ಆ ಯುವತಿ ಸಾಯುವ ನಿರ್ಧಾರ ಮಾಡುತ್ತಾಳೆ. ಈ ಸಂದರ್ಭದಲ್ಲಿ ತುಷಾರ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಭುವನೇಶ್ವರಿ ಹೆಗಡೆ ಅವರ 'ಏಕಾಂತ ಸುಖ' ಲಲಿತ ಪ್ರಬಂಧವನ್ನು ಓದಿದಾಗ ಮನಸ್ಥಿತಿ ಬದಲಾಗುತ್ತದೆ. ಪರಿಣಾಮವಾಗಿ ಆ ಯುವತಿಗೆ ಚಿತ್ರಕಲೆಯಲ್ಲಿ ಆಸಕ್ತಿ ಇದ್ದ ಕಾರಣ ಮನೆಯಿಂದಲೇ ಚಿತ್ರಕಲೆಯಲ್ಲಿ ಪದವಿ ಓದಲು ಸೇರಿಕೊಂಡದ್ದಲ್ಲದೆ ಸದಾ ಲವಲವಿಕೆಯಿಂದ ಕೂಡಿರುತ್ತಾಳೆ. ಇದನ್ನು ನೋಡಿದ ಗಂಡನಿಗೆ ಆಶ್ಚರ್ಯದ ಜೊತೆಗೆ ಸಮಾಧಾನವನ್ನು ತಂದು ಕೊಟ್ಟಿತು ಎಂಬ ವಿಚಾರವನ್ನು ಆ ನೊಂದ ಯುವತಿ ಲೇಖಕಿಗೆ ಪತ್ರ ಬರೆದು ತಿಳಿಸಿದರು. ಇದು ಸಾಹಿತ್ಯ ಬರೆಹಕ್ಕೆ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡ ಸಂತೋಷಕ್ಕಿಂತ ಹೆಚ್ಚಿನದು. ಹಾಗೆಯೇ ಇದು ನನ್ನ ಬರೆಹದ ಸಾರ್ಥಕ್ಯವೆಂದು ಭುವನೇಶ್ವರಿ ಹೆಗಡೆ ಅವರು ಹೇಳಿಕೊಂಡಿದ್ದಾರೆ. ಇದೊಂದು ನಿದರ್ಶನವಷ್ಟೆ. ಸಮಾಜದಲ್ಲಿ ಇಂತಹ ಸಾಕಷ್ಟು ಘಟನೆಗಳು ದೈನಂದಿನ ಬದುಕಿನಲ್ಲಿ ಜರುಗುತ್ತವೆ. ಆದರೆ ಬೇರೆ ಬೇರೆ ಸ್ವರೂಪವನ್ನು ಪಡೆದುಕೊಂಡಿರುತ್ತವೆ ಅಷ್ಟೆ.

ಈ ಪ್ರಬಂಧದ ಸ್ವಾರಸ್ಯ ಇಷ್ಟಕ್ಕೆ ನಿಲ್ಲುವುದಿಲ್ಲ. ಲೇಖಕಿ ಏಕೆ ಏಕಾಂತವನ್ನು ಈ ಮಟ್ಟಿಗೆ ಬಯಸುತ್ತಾರೆ? ಪುರುಷನು ಏಕಾಂತವನ್ನು ಬಯಸುತ್ತಾನೆಯೇ? ಎಂಬ ಪ್ರಶ್ನೆ ಮೂಡುತ್ತದೆ. ಪುರುಷನು ಏಕಾಂತವನ್ನು ಬಯಸುವ ಸಂದರ್ಭಗಳು ಇದ್ದರೂ, ಅವನಿಗೆ ಏಕಾಂತದ ಸುಖ ಬೇಕೆನಿಸಿದಾಗ ಅದನ್ನು ಸುಲಭವಾಗಿ ಪಡೆದುಕೊಳ್ಳುವ ಸಾಮಾರ್ಥ್ಯ ಹೆಣ್ಣಿಗಿಂತ ಹೆಚ್ಚಿಗಿದೆ. ಆದರೆ ಹೆಣ್ಣಿಗೆ ಇದು ವಿರಳವೆಂದೇ ಹೇಳಬಹುದು. 21 ನೇ ಶತಮಾನದ ಈ ಕಾಲದಲ್ಲಿಯೂ ಹೆಣ್ಣಿಗೆ ತನ್ನದೇ ಆದ ಒಂದು ಜಗತ್ತನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಪುರುಷ ತನ್ನತನವನ್ನು ಪಡೆದುಕೊಳ್ಳುವುದಕ್ಕೆ, ತಾನು ನಿರಾಳತನವನ್ನು ಅನುಭವಿಸುವುದಕ್ಕೆ ವಿಶಾಲ ಜಗತ್ತು ಅವನಿಗಿದೆ. ಹೆಣ್ಣಿಗೆ ಈ ಜಗತ್ತು ಇದೆಯಾ? ಇದ್ದರೆ ಎಷ್ಟಿದೆ? ಇಲ್ಲವಾದರೆ, ಏಕೆ ಇಲ್ಲ ಎಂಬುದನ್ನು ಚಿಂತಿಸುವಂತೆ ಪ್ರೇರೇಪಿಸುತ್ತದೆ ಈ ಪ್ರಬಂಧ.

ಹೆಣ್ಣಿನ ಏಕಾಂತ ಮತ್ತು ಹೆಣ್ಣಿನದೇ ಆದ ಜಗತ್ತಿಗೆ ತುಂಬಾ ಮಹತ್ವವಿದೆ ಎಂದು ಪಾಶ್ಚಾತ್ಯ ಸ್ತ್ರೀವಾದಿಗಳು ಕಂಡುಕೊಂಡಿದ್ದಾರೆ. ವರ್ಜೀನಿಯಾ ವುಲ್ಫ್ 'ಎ ರೂಮ್ ಆಫ್ ಒನ್ಸ್ ಒನ್' ಎಂಬ ತನ್ನ ಕೃತಿಯಲ್ಲಿ ಹೆಣ್ಣಿಗೆ ಅವಳದೇ ಆದಂತಹ ಪ್ರತ್ಯೇಕ ಕೊಠಡಿ ಬೇಕು ಎಂದು ಹೇಳುತ್ತಾ ಅದರ ಮಹತ್ವವೇನು ಎಂಬುದನ್ನು ವಿವರಿಸಿದ್ದಾರೆ. ಸಮಾಜದಲ್ಲಿ ಹೆಣ್ಣು ಪಿತೃಪ್ರಧಾನ ಸಂಸ್ಕೃತಿಯ

ಮಾರ್ಗದರ್ಶನದಂತೆ ಬದುಕನ್ನು ರೂಪಿಸಿಕೊಳ್ಳಬೇಕಾದ ಅನಿವಾರ್ಯ ಸ್ಥಿತಿಯನ್ನು ಇಲ್ಲವಾಗಿಸಿಕೊಳ್ಳಬೇಕೆಂಬ ಕಾರಣದಿಂದ ನಮಗೆ ನಮ್ಮದೇ ಆದ ಸ್ಪೇಸ್ ಇರಬೇಕೆಂದು ಹಕ್ಕೊತ್ತಾಯವನ್ನು ಮಾಡುತ್ತಾರೆ. ಇದರಿಂದ ತಮ್ಮತನವನ್ನು ರೂಪಿಸಿಕೊಳ್ಳುವ, ತಮ್ಮತನವನ್ನು ಕಾಪಾಡಿಕೊಳ್ಳುವ, ತಮ್ಮನ್ನು ಪರಿಪೂರ್ಣವಾಗಿ ಅರಿಯುವ, ತಮ್ಮ ಅನನ್ಯತೆಯನ್ನು ತೋರಿಸಿಕೊಳ್ಳುವ ಸಾಧ್ಯತೆಗಳು ಇವೆ ಎಂಬ ನಂಬಿಕೆಯಿಂದ ಸ್ತ್ರೀವಾದಿಗಳು ಈ ಹಕ್ಕೊತ್ತಾಯವನ್ನು ಮಾಡುತ್ತಾ ಬಂದಿದ್ದಾರೆ.

ಲೇಖಕಿಯು ಏಕೆ ಏಕಾಂತವನ್ನು ಇಷ್ಟೊಂದು ಬಯಸುತ್ತಿದ್ದಾರೆ ಎಂಬ ಪ್ರಶ್ನೆಗೆ, ಇವರ ಇತರ ಲಲಿತ ಪ್ರಬಂಧಗಳಾದ ‘ಮಳೆ ಬಂದರೆ’, ‘ಪಕ್ಕದ ಮನೆ ಬೇಕೇ?’ ಹಾಗೂ ‘ಕೈಗಡದ ಕಲಾವಿದರು’ ಎಂಬ ಅವರ ಇತರ ಪ್ರಬಂಧಗಳಲ್ಲಿ ಮುಖ್ಯ ವಿಚಾರಗಳನ್ನು ಚರ್ಚಿಸುವುದರ ಮೂಲಕ ತಕ್ಕ ಮಟ್ಟಿಗಾದರೂ ಉತ್ತರವನ್ನು ಕಂಡುಕೊಳ್ಳಬಹುದು. ಪುರುಷ ಪ್ರಧಾನ ಸಮಾಜ ‘ಹೆಣ್ಣು ಎಂದರೆ ಹೀಗೆಯೇ ಇರಬೇಕು’ ಎಂಬ ಚೌಕಟ್ಟನ್ನು ಹಾಕಿರುವುದನ್ನು ಹಾಗೂ ಈ ಚೌಕಟ್ಟನ್ನು ಹೆಣ್ಣು ಕೂಡ ಮೌನವಾಗಿ ಒಪ್ಪಿಕೊಂಡು ರೂಢಿಸಿಕೊಂಡು ಬಂದವರಾದ್ದರಿಂದ, ತನ್ನ ಸ್ತ್ರೀ ಕುಲಕ್ಕೆ ತನಗರಿವಿಲ್ಲದಂತೆ ತಾನೆ ನೋವುಂಟು ಮಾಡುತ್ತಿರುವುದನ್ನು ಈ ಪ್ರಬಂಧಗಳಲ್ಲಿ ಗುರುತಿಸಬಹುದು. ‘ಮಳೆ ಬಂದರೆ’ ಪ್ರಬಂಧದಲ್ಲಿ ಲೇಖಕಿಗೆ ಮಳೆಯಲ್ಲಿ ನೆನೆಯುವುದು ಸಂತೋಷವನ್ನು ನೀಡುತ್ತಿದ್ದರೆ; ಈ ದೃಶ್ಯ ನೆರೆಮನೆಯ ಹೆಣ್ಣು ಮಗಳಿಗೆ ಹುಚ್ಚುತನವಾಗಿ ಕಾಣುತ್ತದೆ. ಇದೇ ದೃಶ್ಯ ಆಟೋ ಚಾಲಕನಿಗೆ ‘ಹೆಣ್ಣು ಮಗಳು’ ಎಂಬ ಕನಿಕರ ಉಂಟಾಗಿ ಮಳೆಯಲ್ಲಿ ನೆನೆದು ಹೋಗುತ್ತಿರುವ ಉದ್ದೇಶವನ್ನು ಕೇಳದೆ, ನಾನು ನಿಮ್ಮಿಂದ ಹೆಚ್ಚಿನ ಹಣ ನೀರಿಕ್ಷಿಸುವುದಿಲ್ಲವೆಂದು ತಿಳಿಸಿ ಆಟೋದಲ್ಲಿ ಅವರ ಮನೆಯವರೆಗೆ ಬಿಟ್ಟು ಬರುತ್ತಾನೆ. ಒಂದು ವೇಳೆ ಲೇಖಕಿಯೇ ತನ್ನ ಉದ್ದೇಶವನ್ನು ಹೇಳಿದ್ದರೂ, ಈ ವ್ಯಕ್ತಿಗೂ ಕೂಡ ಹುಚ್ಚುತನವಾಗಿ ಕಾಣುತ್ತಿತ್ತು. ಇಲ್ಲಿ ಸ್ತ್ರೀ–ಪುರುಷರಿಬ್ಬರಿಗೂ ಒಂದು ಹೆಣ್ಣಿನ ಭಾವನೆ ಅರ್ಥವಾಗಲಿಲ್ಲ. ಅಂದರೆ ನಾವು ಇಲ್ಲಿ ಗಮನಿಸಬೇಕಾದ ಸೂಕ್ಷ್ಮ ಸಂಗತಿಯೆಂದರೆ ಇಡೀ ವ್ಯವಸ್ಥೆಯಲ್ಲಿ ಹೆಣ್ಣಿನ ಸುತ್ತಾ ಹೆಣೆದಿರುವ ಬಲೆಯಲ್ಲಿ ಸ್ತ್ರೀಯು ಬಿಡಿಸಿಕೊಂಡು ಬರಲಾಗುತ್ತಿಲ್ಲ. ಪುರುಷ ಸಂಪೂರ್ಣ ಮನಸ್ಥಿತಿಯಿಂದ ಬಿಡಿಸಲು ಪ್ರಯತ್ನಿಸುತ್ತಿಲ್ಲ. ಇದೇ ಚಟುವಟಿಕೆಯನ್ನು ಒಂದು ಪುರುಷ ತೊಡಗಿಸಿಕೊಂಡಿದ್ದರೆ, ತನ್ನ ಖುಷಿಗಾಗಿ ಮಳೆಯಲ್ಲಿ ನೆನೆಯುತ್ತಿದ್ದಾನೆ ಎಂದೋ, ‘ಹುಡುಗ’ ಎಂದೋ ಈ ವಿಷಯವನ್ನು ಹೆಚ್ಚು ಪ್ರಸ್ತಾಪಿಸುತ್ತಿರಲಿಲ್ಲ. ಇಂತಹ ಸಾಮಾಜಿಕ ವಾತಾವರಣವಿದ್ದಾಗ ಹೆಣ್ಣು ಸಹಜವಾಗಿ ಏಕಾಂತವನ್ನು ಬಯಸುತ್ತಾಳೆ.

‘ಹೆಣ್ಣಿನ ಜಗತ್ತು ಅಡುಗೆ ಮನೆ. ಇದು ಹೆಣ್ಣಿಗೆ ಏಕಾಂತದ ತಾಣವೂ ಹೌದು. ಆದರೆ ಕೆಲವೊಮ್ಮೆ ಈ ತಾಣವೇ ಹೆಣ್ಣಿನ ಏಕಾಂತಕ್ಕೆ ಅಡ್ಡಿಯನ್ನುಂಟು ಮಾಡುತ್ತದೆ ಎಂಬುವುದನ್ನು ಭುವನೇಶ್ವರಿ ಹೆಗಡೆ ಅವರ ‘ಪಕ್ಕದ ಮನೆ ಬೇಕೇ?’ ಹಾಗೂ ‘ಕೈಗಡದ ಕಲಾವಿದರು’ ಎಂಬ ಲಲಿತ ಪ್ರಬಂಧಗಳಲ್ಲಿ ಕಾಣಬಹುದು. ಟೀ ಪುಡಿ, ಹಾಲು, ಸಕ್ಕರೆ, ಮೆಣಸು, ಸೂಜಿ, ಇಸ್ತ್ರಿ ಪೆಟ್ಟಿಗೆ, ದೈನಂದಿನ ಪತ್ರಿಕೆ ಮುತಾಂದ ವಸ್ತುಗಳನ್ನು ವಿಶ್ರಾಂತಿ ಪಡೆಯುತ್ತಿದ್ದ ಅಥವಾ ಏಕಾಂತದ ಕೆಲಸಗಳನ್ನು ಮಾಡುತ್ತಿದ್ದ ಸಂದರ್ಭದಲ್ಲಿ ಸನ್ನಿವೇಶ ಗೊತ್ತಿದ್ದರೂ ಪೂಸಿ ಹೊಡೆಯುತ್ತಾ, ಸಮಯ ವ್ಯಯಗೊಳಿಸುತ್ತಾ ಮಹಿಳೆಯರನ್ನು ಕೇಳಿ ಪಡೆಯುತ್ತಾರೆಯೇ ಹೊರತು ಪುರುಷನನ್ನು ಕೇಳುವುದಿಲ್ಲ. ಇದೇ ಪರಿಸ್ಥಿತಿಯಲ್ಲಿ ಪುರುಷನಿದ್ದರೆ ಹೆಚ್ಚಿನ ಜನರು ಏಕಾಂತಕ್ಕೆ ಅಡ್ಡಿಯನ್ನುಂಟು ಮಾಡಬಾರದು ಎಂತಲೋ, ಕೋಪ ಅಥವಾ ಬೇಸರ ಮಾಡಿಕೊಳ್ಳುತ್ತಾರೆ ಎಂತಲೋ ಮೌನವಾಗಿಬಿಡುತ್ತಾರೆ. ಈ ಭಿನ್ನತೆಯ

ಮನೋಭಾವವೇ ಹೆಣ್ಣು ಗಂಡಿಗಿಂತ ಹೆಚ್ಚು ಏಕಾಂತವನ್ನು ಬಯಸಲು ಕಾರಣವಾಗಿರುತ್ತದೆ ಎಂಬ ಸೂಕ್ಷ್ಮತೆಯನ್ನು ಈ ಒಂದು ಸನ್ನಿವೇಶದಿಂದ ತಿಳಿಯಬಹುದು. ಇಲ್ಲಿ ಸಮಾಜಕ್ಕೆ ಚೌಕಟ್ಟನ್ನು ನಿರ್ಮಿಸಿರುವವನು ಪುರುಷನೇ. ಆದ್ದರಿಂದ ತನಗೆ ಬೇಕಾದ್ದನ್ನು ತಾನು ರೂಪಿಸಿಕೊಂಡಿದ್ದಾನೆ. ಹಾಗಾಗಿ ಪುರುಷನು ಸಮಾಜದಲ್ಲಿ ನನಗೆ ಹೆಚ್ಚಿನ ಮುಕ್ತ ಸ್ವಾತಂತ್ರ್ಯವಿದೆ ಎಂಬ ಭಾವನೆ ಹೊಂದಿರುವುದು ಹೆಚ್ಚುಗಾರಿಕೆಯಾಗುತ್ತದೆ ಎಂದರೆ ತಪ್ಪಾಗಲಾರದು.

ಒಟ್ಟಾರೆ ಜೀವನದಲ್ಲಿ ಪ್ರತಿಯೊಬ್ಬ ಮನುಷ್ಯನು ತನ್ನದೇ ಆದ ಶೈಲಿಯಲ್ಲಿ ಸುಖವನ್ನು ಕಂಡುಕೊಳ್ಳುತ್ತಾನೆ. ಕೆಲವರು ಕುಟುಂಬದೊಡನೆ, ಕೆಲವರು ಸಾಮಾಜಿಕ ಗುಂಪುಗಳೊಡನೆ ಬೆರೆಯುವ ಮೂಲಕ ತಮ್ಮ ಸಂತೋಷವನ್ನು ಕಂಡುಕೊಂಡರೆ, ಇನ್ನು ಕೆಲವರು ಏಕಾಂತದಲ್ಲಿ ಸುಖವನ್ನು ಕಂಡುಕೊಳ್ಳುತ್ತಾರೆ. ಮತ್ತೆ ಕೆಲವರು ಏಕಾಂತದ ಕ್ಷಣಗಳನ್ನು ಏಕಾಂಗಿತನವಾಗಿ ಪರಿಭಾವಿಸಿ ಮಾನಸಿಕ ಸ್ವಾಸ್ಥ್ಯವನ್ನು ಕಳೆದುಕೊಳ್ಳುತ್ತಾರೆ. ಇಂತಹ ಮನಸ್ಸುಳ್ಳವರಿಗೆ ಕಿವಿಮಾತನ್ನು ನೀಡಬಲ್ಲಂತಹದ್ದು ಭುವನೇಶ್ವರಿ ಹೆಗಡೆಯವರ ಲಲಿತ ಪ್ರಬಂಧ 'ಏಕಾಂತ ಸುಖ'. ಈ ಪ್ರಬಂಧದಲ್ಲಿ ಏಕಾಂತವನ್ನು ಸಕರಾತ್ಮಕವಾಗಿ ಅನುಭವಿಸುವ ಉಪಾಯವನ್ನು ಹೇಳುವುದರ ಮೂಲಕ ಪ್ರಸ್ತುತ ದಿನಗಳಲ್ಲಿನ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ಏಕಾಂತವನ್ನು, ಏಕಾಂತ ಸುಖವನ್ನಾಗಿಸುವ ಬಗೆಯನ್ನು ಅನುಭವಾತ್ಮಕವಾಗಿ ಕಟ್ಟಿಕೊಟ್ಟಿದ್ದಾರೆ.

**ಕೊನೆ ಟಿಪ್ಪಣಿ**

1. ಭುವನೇಶ್ವರಿ ಹೆಗಡೆ. (2011). *ಸಮಗ್ರ ಲಲಿತ ಪ್ರಬಂಧಗಳು.* ಪುಟ. 1

**ಆಕರ ಗ್ರಂಥ**


- ಭುವನೇಶ್ವರಿ ಹೆಗಡೆ. (2011). *ಸಮಗ್ರ ಲಲಿತ ಪ್ರಬಂಧಗಳು.* (ಮೊದಲನೇ ಮುದ್ರಣ). ಸಪ್ನ ಬುಕ್ ಹೌಸ್.


**ಅಂತರ್ಜಾಲ/ಯೂಟ್ಯೂಬ್ ಮಾಹಿತಿ ಕೊಂಡಿಗಳು**


- *ಅಬ್ಧಿ ಅಂತರಂಗ.* ಅಬ್ಧಿ ಅಮೇರಿಕ ಕ್ರೀಯೆಷನ್.
  https://youtu.be/mS4TDp1cMcM?si=1YbMnOw5w-19aw
- *ಮಾತುಕತೆ.* ಪ್ರತಿಲಿಪಿ,
  https://youtu.be/6DWi17PQ4u4?si=gpWtRzQt8TFAiUKK